ಉಭಯಭಾಷಾ ಚಿತ್ರಕಥಾಪಟ

# ಕಾಗೆಯ ಕೊಳಲು

೪

# Flute of a Crow



ರಚನೆ: ರೇಣುಕಾ ಕೋಡಗುಂಟಿ

ಆಕರ: 'ಪಾಟಿಚೀಲ' ಮಕ್ಕಳ ಕಥಾ ಸಂಕಲನ

ಪ್ರಕಾಶನ: ಅವ್ಯಕ್ತ ಪ್ರಕಾಶನ

ಅನುವಾದ: ಗೀತಾ ಕೇಶವ್, ಬೆಂಗಳೂರು

ಚಿತ್ರಗಳು: ಮಲ್ಲಪ್ಪ ಅ. ನಾಟಿಕಾರ, ವಿಜಯಪುರ

**ಶಿಕ್ಷಕರ ನಿವೇದನೆ:**

ಈ ವಿಶಿಷ್ಟ ಚಿತ್ರಕಥಾಪಟದಲ್ಲಿ ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಕಥೆಯನ್ನು ಕೊಡಲಾಗಿದೆ. ಈ ಚಿತ್ರಕಥಾಪಟವನ್ನು ಮಕ್ಕಳಿಗೆ ತೋರಿಸುತ್ತಾ ಕಥೆಯನ್ನು ಓದಿ ಹೇಳುತ್ತಲೇ ಸಂವಾದ ನಡೆಸಿರಿ. ನಂತರ ಮಕ್ಕಳೇ ಸ್ವತಃ ಓದಲು ಪ್ರೋತ್ಸಾಹಿಸಿ.

ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ

**Dhwani Educational Resource Centre**

ಜನವರಿ ಫೆಬ್ರವರಿ ಮಾರ್ಚ್ – ೨೦೨೫

ಆರಂಭ ಯೋಜನೆ

Arambha 2024-25 Project is Supported by Many Individual Donors


ಅದೊಂದು ದಟ್ಟ ಅರಣ್ಯ. ಆ ಅರಣ್ಯದ ಒಂದು ಭಾಗವು ಗುಂಪು ಗುಂಪಾದ ಹಚ್ಚ ಹಸಿರಿನ ಮರಗಿಡಗಳಿಂದ ಕೂಡಿತ್ತು. ಅರಣ್ಯದ ಈ ಒಂದು ಭಾಗವು ಹಕ್ಕಿಗಳಿಗೆ ಮೀಸಲಾಗಿತ್ತು. ಎಲ್ಲಾ ಬಗೆಯ ಹಕ್ಕಿಗಳು ಅಲ್ಲಿ ನೆಲೆಸಿದ್ದವು. ಒಮ್ಮೆ ಹಕ್ಕಿಗಳೆಲ್ಲವು ಸಭೆ ಸೇರಿದವು. ನಾವೆಲ್ಲರೂ ಸೇರಿ ಒಂದು ದಿನ ಹಬ್ಬವನ್ನು ಮಾಡೋಣ ಎಂದವು. ಆ ದಿನ ಆಸಕ್ತಿಯಿದ್ದ ಕೆಲವು ಹಕ್ಕಿಗಳು ತಮ್ಮಲ್ಲಿದ್ದ ಪ್ರತಿಭೆಯನ್ನು ಪ್ರದರ್ಶಿಸಲು ಅವಕಾಶ ಇದೆ ಎಂದು ನಿರ್ಧರಿಸಿದವು.
It was a thick forest. A part of the forest was covered with bright green plants and trees, spread across in groups. This part of the forest was reserved for birds. All kinds of birds had settled there. Once all the birds held a meeting. They talked of holding a festival. That day, some of the interested birds decided that this is an opportunity to exhibit their talents.



ಹಬ್ಬದ ಸಂಭ್ರಮಕ್ಕಾಗಿ ಹಕ್ಕಿಗಳೆಲ್ಲ ಸಂತಸ ಸಡಗರದಿಂದ ವೇದಿಕೆಯೊಂದನ್ನು ಸಿದ್ಧಪಡಿಸಿ ಬಗೆಬಗೆಯ ಆಹಾರಗಳನ್ನು ತಯಾರಿಸಿದವು. ಹಬ್ಬದ ದಿನ ಬಂದಿತು. ಎಲ್ಲಾ ಹಕ್ಕಿಗಳು ಬಹಳ ಸಂತೋಷದಿಂದ ಹಬ್ಬದ ಆಚರಣೆಯಲ್ಲಿ ತೊಡಗಿಕೊಂಡವು.

**For joyous celebration of the Festival, all the birds made arrangements for a stage, and prepared variety of dish. The Festival Day arrived. All the birds involved themselves in the festival celebration.**



ಹಕ್ಕಿಗಳಿಗೆಲ್ಲ ನಾಯಕನಾಗಿದ್ದ ನವಿಲು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿತ್ತು. ಕೆಂಬೂತ ನಿರೂಪಣೆ ಕೆಲಸವನ್ನು ವಹಿಸಿಕೊಂಡಿತ್ತು. ಚಂದ್ರಮುಕುಟ ಹಕ್ಕಿ, ನೀಲಕಂಠ ಹಕ್ಕಿ ಎರಡೂ ಸ್ಪರ್ಧೆಯ ನಿರ್ಣಾಯಕರ ಕೆಲಸವನ್ನು ವಹಿಸಿಕೊಂಡಿದ್ದವು. ಮೊದಲಿಗೆ ಎರಡು ಸಣ್ಣ ಮಿಂಚುಳ್ಳಿಗಳು ಬಂದು ಪ್ರಾರ್ಥನಾ ಗೀತೆ ಹೇಳಿದವು.

**Peacock which was the leader of the birds was President of the function. Greater causal bird took up the task of compering. Moon crested bird and Indian Roller were the judges of the competition. To start with, two kingfishers sang prayer song.**



ನಂತರ ಗಿಳಿಯು ಬಂದು ನೃತ್ಯಪ್ರದರ್ಶನ ಮಾಡಿತು. ಕೋಗಿಲೆಯೊಂದು ಹಾಡನ್ನು ಹಾಡಿತು, ನವರಂಗ ಹಕ್ಕಿಯು ವಾದ್ಯವನ್ನು ನುಡಿಸಿತು.

**Then, parrot gave a dance performance. Cuckoo (kogile) sang a song. Indian Pitta bird played an instrument.**



ಕೊಕ್ಕರೆಯೊಂದು ತನ್ನ ಭಿನ್ನ ನಡಿಗೆಯನ್ನು ಪ್ರದರ್ಶಿಸಿ ಎಲ್ಲರನ್ನು ನಗಿಸಿತು. ಕೌಜಗ ಹಕ್ಕಿಯು ನಗೆಹನಿಯನ್ನು ಹೇಳಿತು. ಟುವ್ವಿ ಹಕ್ಕಿ ಮಿಮಿಕ್ರಿ ಮಾಡಿತು. ಪಾರಿವಾಳ ಯೋಗಾಸನ ಮಾಡಿತು. ಗುಬ್ಬಿಯು ತನ್ನ ಕಾಲಿನಿಂದ ಬಣ್ಣವನ್ನು ಬಳಸಿ ಚಿತ್ರವನ್ನು ಬಿಡಿಸಿತು.

**The Crane (kokkare) exhibited a different kind of walking and made everybody laugh. The quill narrated a Joke. The Spotted dove did mimikri. The pigeon did yogasana. Sparrow drew a drawing using colours with its feet.**



ಇವರೆಲ್ಲರೂ ಪ್ರದರ್ಶನ ನೀಡುವುದನ್ನು ಕಂಡ ಕಾಗೆಯೊಂದು ಉತ್ಸಾಹಗೊಂಡು ತಾನು ಹಾಡನ್ನು ಹಾಡುವುದಾಗಿ ವೇದಿಕೆಯ ಮೇಲೆ ಬಂದು ನಿಂತಿತು. ಕಾಗೆಯು ಹಾಡನ್ನು ಹಾಡಲು ಪ್ರಾರಂಭಿಸಿತು. ಆಗ ಅಲ್ಲಿದ್ದ ಹಕ್ಕಿಗಳು, "ಥೇ ಎಷ್ಟೊಂದು ಕರ್ಕಶವಾಗಿದೆ ಕೇಳಲಾಗದು." ಎಂದು ಟೀಕೆ ಮಾಡಿದವು.

Seeing the exhibition of these birds, a Crow became very enthusiastic and offered to sing a song and stood on the stage. It started singing. The birds commented saying "such a hoarse voice, cannot hear".



ಇನ್ನು ಕೆಲವು ಹಕ್ಕಿಗಳು ಕಿವಿಯನ್ನು ಮುಚ್ಚಿಕೊಂಡು, “ಈ ಕಾಗೆ ತನ್ನ ಕೆಟ್ಟ ದನಿಯಿಂದ ಹಾಡಿ, ನಮ್ಮ ಸಂತೋಷವನ್ನು ಹಾಳು ಮಾಡಿತು.” ಎನ್ನುತ್ತಾ ಕಾಗೆಗೆ ಬೈದವು. ಇದನ್ನು ಕೇಳಿ ಕಾಗೆ ವೇದಿಕೆಯಲ್ಲೆ ಅಳಲು ಪ್ರಾರಂಭಿಸಿತು. ವೇದಿಕೆ ಮೇಲಿದ್ದ ಹಕ್ಕಿಗಳು ಸಮಾಧಾನಿಸಲು ಯತ್ನಿಸಿದವು.

There birds closed their ears and cursed saying "this crow spoilt our happiness by singing in a bad voice." On hearing this, the crow started crying on the stage. The other birds on the stage tried to console the crow.



ಆದರೂ ಕಾಗೆ ಅವರ ಮಾತಿಗೆ ಅವಕಾಶ ಕೊಡದೆ ತನ್ನ ರೆಕ್ಕೆಗಳನ್ನು ಬಿಚ್ಚಿ ಅಲ್ಲಿಂದ ಹಾರಿ ಹೋಯಿತು. ಕಾಗೆ ತುಂಬಾ ದೂರ ದೂರ ಹಾರಿ ಬಂದಿತು. ಅಲ್ಲಿ ಒಬ್ಬ ವ್ಯಕ್ತಿ ಬಿದಿರಿನಿಂದ ಸಣ್ಣ ಸಣ್ಣ ಕೊಳಲುಗಳನ್ನು ತಯಾರಿಸುತ್ತಾ ಕುಳಿತಿದ್ದನು. ಒಂದು ಕೊಳಲನ್ನು ಹಿಡಿದು ಆತ ನುಡಿಸಿದನು.

**But the crow didn't allow them to speak, and flew away from there, opening it's wings. The crow flew far away. A man was making small flutes with cane. By the time the crow there, he played the flute.**



ಇಂಪಾಗಿರುವ ಆ ಕೊಳಲ ದನಿಯನ್ನು ಕೇಳಿ ಕಾಗೆಯು ಕುತೂಹಲದಿಂದ ಕೆಳಗೆ ಇಳಿಯಿತು. ವ್ಯಕ್ತಿಯ ಬಳಿ ಬಂದು, ತನಗೂ ಕೊಳಲು ನುಡಿಸಲು ಕಲಿಸುವಂತೆ ಆತನಲ್ಲಿ ಬೇಡಿಕೊಂಡಿತು. ವ್ಯಕ್ತಿಯು ಒಪ್ಪಿ ಕಾಗೆಗಾಗಿಯೇ ಒಂದು ವಿಶೇಷವಾದ ಸಣ್ಣ ಕೊಳಲನ್ನು ತಯಾರಿಸಿ ಕೊಳಲು ನುಡಿಸುವುದನ್ನು ಕಲಿಸಿದನು.

**On listening to the melodious tune, the crow flew down with curiosity. It came near the man and requested him to teach how to play the flute. He agreed and made a flute specially for the crow and taught. On learning to play the flute,**



ಕೊಳಲು ನುಡಿಸಲು ಕಲಿತ ಕಾಗೆ, ಅದನ್ನು ತನ್ನ ಎರಡೂ ಕಾಲುಗಳಲ್ಲಿ ಹಿಡಿದುಕೊಂಡು ಮೊದಲು ತಾನು ವಾಸವಿದ್ದ ಪ್ರದೇಶಕ್ಕೆ ಬಂದಿತು. ಒಂದು ಮರದ ಮೇಲೆ ಕುಳಿತು ಕೊಳಲನ್ನು ನುಡಿಸಲು ಪ್ರಾರಂಭಿಸಿತು. ಆ ಧ್ವನಿಯನ್ನು ಕೇಳಿದ ಹಕ್ಕಿಗಳು,“ಇದೇನಿದು ಇಷ್ಟೊಂದು ಇಂಪಾಗಿದೆ. ಇದುವರೆಗೂ ಇಂತಹ ಮಧುರವಾದ ಸ್ವರವನ್ನು ಕೇಳಿಯೇ ಇಲ್ಲವಲ್ಲ!” ಎಂದು ಅಚ್ಚರಿಯಿಂದ ಆ ಧ್ವನಿಯನ್ನು ಅರಸುತ್ತಾ ಹೋದವು. ಅಲ್ಲಿ ತಮ್ಮಿಂದ ಅವಮಾನಕ್ಕೊಳಗಾದ ಕಾಗೆ ಕೊಳಲನ್ನು ನುಡಿಸುತ್ತಿರುವುದನ್ನು ಕಂಡು ಎಲ್ಲಾ ಹಕ್ಕಿಗಳು ಬೆಪ್ಪಾದವು.

ಅನಂತರ ಕಾಗೆಯ ಬಳಿ ಹೋಗಿ,“ಎಷ್ಟೊಂದು ಚೆನ್ನಾಗಿ ನುಡಿಸುವೆ, ಕೇಳಲು ತುಂಬಾ ಇಂಪಾಗಿದೆ. ನಮ್ಮಿಂದ ಆದ ತಪ್ಪನ್ನು ಮನ್ನಿಸು, ನಿನಗಾಗಿ ವಿಶೇಷವಾದ ಸಂಗೀತ ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತೇವೆ. ನೀನು ಕೊಳಲನ್ನು ನುಡಿಸಿ ನಮ್ಮೆಲ್ಲರಿಗೂ ಖುಷಿ ಹಂಚಬೇಕು.” ಎಂದು ಕೇಳಿಕೊಂಡವು. ಕಾಗೆ ಅವರ ಮಾತಿಗೆ ಸಮ್ಮತಿ ಸೂಚಿಸಿತು.

The crow picked the flute with its feet and flew back to the place where it resided earlier. It started playing the flute. On listening to the tune, the birds were surprised and went in search the melodious voice saying "we had never heard such melody. " They saw that the crow which was insulted by them was playing the flute and felt fooled.

They went to the crow and said "how well you play, so pleasing to hear. Please forgive our mistake. We will hold a special music function for you. Please play the flute and spread happiness among us."




'ಧ್ವನಿ' ಶೈಕ್ಷಣಿಕ ಯೋಜನೆಗಳ ವ್ಯಾಪ್ತಿಯಲ್ಲಿ
ಉಚಿತ ಹಂಚಿಕೆಗಾಗಿ

ಸಂಪರ್ಕ ಮಾಹಿತಿ

ಧ್ವನಿ

ಶೈಕ್ಷಣಿಕ ಸಂಪನ್ಮೂಲ ಕೇಂದ್ರ

# ೭೬,'ಪುಷ್ಪಾಂಜಲಿ' ೩ನೇ ಅಡ್ಡರಸ್ತೆ

ಶಿವಗಿರಿ, ಧಾರವಾಡ–೫೮೦೦೦೭

ಮೊ. ೯೮೮ ೬೬೬ ೧೦೫೫

**dhwanitrust@gmail.com**
**www.dhwanitrust.org**

ಗಮನಿಸಿ : ಈ ಶೈಕ್ಷಣಿಕ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೇ ವಾಣಿಜ್ಯ ಉದ್ದೇಶಗಳಿಗಾಗಿ ಪುನರ್ಮುದ್ರಿಸುವುದಾಗಲೀ, ಬಳಸಿಕೊಳ್ಳುವುದಾಗಲೀ ನಿಷಿದ್ಧ. ಶೈಕ್ಷಣಿಕ ಉದ್ದೇಶದಿಂದ ಶಿಕ್ಷಕರು, ಪಾಲಕರು, ಸಂಪನ್ಮೂಲ ವ್ಯಕ್ತಿಗಳು ಇದನ್ನು ಉಪಯೋಗಿಸುವುದಾದರೆ ಧ್ವನಿ ಶೈ.ಸಂ.ಕೇಂದ್ರದ ಗಮನಕ್ಕೆ ತರವುದು ಅಪೇಕ್ಷಣೀಯ.